




## ಮರಡಿ ಗುಡ್ಡದಲ್ಲಿ ಮಹಿಷಮರ್ಧಿನಿ

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಪಟ್ಟಣದ ಹೃದಯ ಭಾಗದಲ್ಲಿ ಮಹದೇಶ್ವರರು ಮಂಡಿಯೂರಿರುವ ಮರಡಿ ಗುಡ್ಡವಿದೆ. ಇಲ್ಲಿನ ಬಂಡೆಯ ಮೇಲೆ ವಿಷ್ಣು ದುರ್ಗಾ ಉಬ್ಬು ಶಿಲ್ಪವಿದೆ. ಈ ಶಿಲ್ಪವು ಅಪರೂಪವಾಗಿದ್ದು, ವಿಷ್ಣುವಿನ ಸ್ವರೂಪವಾದ ನಾಲ್ಕು ಕೈಗಳನ್ನು ಇಲ್ಲಿ ಕಾಣಬಹುದು. ಊರ್ಧ್ವಮುಖವಾಗಿರುವ ಬಲ ಹಸ್ತದಲ್ಲಿ ಚಕ್ರ ಮತ್ತು ಎಡ ಹಸ್ತದಲ್ಲಿ ಶಂಖವಿದೆ. ಸೊಂಟದ ಭಾಗದಲ್ಲಿ ಇರುವ ಸ್ವಾಭಾವಿಕ ಬಲಗೈ ಅಭಯ ಹಸ್ತದಲ್ಲಿದ್ದರೆ, ಎಡಗೈ ತೊಡೆಯ ಮೇಲಿದೆ. ಚೋಳರ ಕಾಲದಲ್ಲಿ ಕೆತ್ತನೆ ಮಾಡಲಾಗಿರಬಹುದಾದ ಈ ಉಬ್ಬು ಶಿಲ್ಪವು ಎಮ್ಮೆಯ ಮೇಲೆ ನಿಂತಿರುವುದರಿಂದ ಇದು ಚಾಮುಂಡಿಯ ಅವತಾರ, ಅಂದರೆ ಮಹಿಷಮರ್ಧಿನಿಯಾಗಿದೆ.

—ನಾನಾ, ಕೊಳ್ಳೇಗಾಲ





## ಕಲಬುರಗಿ: ಫಿರಂಗಿಗಳ ಕೋಟೆ

14ನೇ ಶತಮಾನದಲ್ಲಿ ಬಹಮನಿ ಸುಲ್ತಾನರು ಆಳುತ್ತಿದ್ದ ಕಲಬುರಗಿಯ ಕೋಟೆಯು ಫಿರಂಗಿಗಳ ಬಳಕೆಯಲ್ಲಿ ವಿಶೇಷ ಸ್ಥಾನ ಪಡೆದಿದೆ. ಮಧ್ಯಕಾಲೀನ ಚರಿತ್ರೆಯ ಪ್ರಕಾರ ದೇಶದಲ್ಲೇ ಮೊಟ್ಟಮೊದಲು ತೋಪುಗಳನ್ನು ಬಳಸಿದ ಖ್ಯಾತಿಯೂ ಬಹಮನಿ ಸುಲ್ತಾನರಿಗೆ ಸಲ್ಲುತ್ತದೆ. ಇದಕ್ಕೆ ಸಾಕ್ಷಿಯೆಂಬಂತೆ 4 ರಿಂದ 29 ಅಡಿ ಉದ್ದದವರೆಗಿನ ವಿವಿಧೋದ್ದೇಶಿತ ಸುಮಾರು 26 ಫಿರಂಗಿಗಳು ಇಲ್ಲಿವೆ. ಅವುಗಳಲ್ಲಿ ಪ್ರಸಕ್ತ 17 ಮಾತ್ರ ಕಣ್ಣಿಗೆ ಕಂಡರೆ, ಉಳಿದವು ಮುಳ್ಳು ಕಂಟಿಗಳಲ್ಲಿ ಮರೆಯಾಗಿವೆ. 26 ಫಿರಂಗಿಗಳ ಪೈಕಿ ಯುದ್ಧದ ಸಮಯದಲ್ಲಿ ಹೊತ್ತುಕೊಂಡು ಸಾಗುತ್ತಿದ್ದವು, ಇನ್ನೂ ಕೆಲವು ಕೋಟೆಯ ರಕ್ಷಣೆಗಾಗಿ ಮೀಸಲಾಗಿದ್ದವು.

ಕೋಟೆಯ ರಕ್ಷಣೆಗೆ ಬಳಸುತ್ತಿದ್ದ ಮೂರು ಬೃಹತ್ ಫಿರಂಗಿಗಳು, ಕೋಟೆಯ ಪ್ರಮುಖ ಭಾಗವಾದ ರಣಮಂಡಲ (ಬಾಲಾ ಹಿಸಾರ್) ಕಟ್ಟಡದ ಮೇಲ್ಭಾಗದಲ್ಲಿವೆ. ರಣಮಂಡಲವು ಕೋಟೆಯ ಉತ್ತರ–ದಿಕ್ಕಿನಲ್ಲಿದ್ದು, ಇದು ಒಂದೇ ಪ್ರವೇಶದ್ವಾರ ಹೊಂದಿರುವ ಸುಮಾರು 10 ಮೀಟರ್ ಎತ್ತರದ ಚೌಕಾಕಾರದ ಗೋಡೆಗಳುಳ್ಳ ಆಕರ್ಷಕ ಘನ ರಚನೆಯಾಗಿದೆ. ಒಳ ಕಮಾನುಗಳು ಶಿಥಿಲಗೊಂಡಿರುವ ಈ ಕಟ್ಟೋಣದೊಳಕ್ಕೆ ಉತ್ತರದಲ್ಲಿರುವ ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದಾಗಿದೆ. ಕಲ್ಲಿನ ಪೀಠಗಳಿರುವ ಮೇಲ್ಛಾವಣಿಯಲ್ಲಿ ಫಿರಂಗಿಗಳನ್ನಿರಿಸಲಾಗಿದ್ದು, ಇವುಗಳನ್ನು ಯುದ್ಧದ ಸಮಯದಲ್ಲಿ ಶಕ್ತಿಶಾಲಿ ರಕ್ಷಣಾ ವ್ಯವಸ್ಥೆಯಾಗಿ ಬಳಸಲಾಗುತ್ತಿತ್ತು.

ಆ ಕಾಲಕ್ಕನುಗುಣವಾಗಿ ಫಿರಂಗಿಗಳನ್ನು ಅತ್ಯಂತ ಆಧುನಿಕ ಯುದ್ಧತಂತ್ರದೊಂದಿಗೆ ವಿನ್ಯಾಸಗೊಳಿಸಲಾಗಿದೆ. ದೀರ್ಘಕಾಲ ಬಾಳುವಂತೆ ಕಬ್ಬಿಣ ಮತ್ತು ಕಂಚಿನಿಂದ ಅವುಗಳನ್ನು ತಯಾರಿಸಲಾಗಿದೆ. ಇವುಗಳಲ್ಲಿ ವಿಶ್ವದಲ್ಲೇ ಅತಿ ದೊಡ್ಡ ತೋಪು ಎಂಬ ಹೆಗ್ಗಳಿಕೆಯೊಂದಿಗೆ ವಿಶಿಷ್ಟವೆನಿಸಿದ 'ಬಾರಹ ಗಜ ತೋಪು' ಪಂಚ ಲೋಹಗಳಿಂದ ನಿರ್ಮಾಣವಾಗಿದೆ. 29 ಅಡಿ ಉದ್ದ ಮತ್ತು 2 ಅಡಿ ವ್ಯಾಸವಿರುವ ಈ ಫಿರಂಗಿ 75 ಟನ್ ತೂಕವಿದೆ. ಇದರಿಂದ 1.5 ಕಿ.ಮೀ. ದೂರದವರೆಗೆ ಮದ್ದು ಸಿಡಿಸಬಹುದು ಎಂದು ಹೇಳಲಾಗುತ್ತದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ